## ಕವಿತೆ




## ಸತ್ಯಾನಂದ ಪಾತ್ರೋಟ

ಕಲೆ: ಬಸವರಾಜ ಕಲೆಗಾರ




# ಮಾತು ಸೊರಗಿದ ಭಾರತ

ತಣ್ಣನೆಯ ಗಾಳಿಯಲಿ
ಇಂಪಾದ ಸ್ವರದಲಿ
ಹಕ್ಕಿಗಳೆರಡು ರೆಕ್ಕೆ ಬಿಚ್ಚಿ
ಬುವಿ ಬಾನು ಒಂದಾಗಿಸಿ
ಕೆಳಗೆ ಮೇಲೆ
ಹಾರುತ್ತಿದ್ದವು, ಕೂಡ್ರುತ್ತಿದ್ದವು
ಕುಣಿಯುತ್ತಿದ್ದವು

ಹಕ್ಕಿಗಳಿಗೆ ಇರಲಿಲ್ಲ
ಆ ಮರ, ಈ ಮರ, ಮಹಾಮರ

ಹಾರು, ಹಾರುತ್ತಲೇ
ಒಮ್ಮೆ ಕೆಳಗೆ ನೋಡಿದವು
ನೋಡಿದತ್ತ
ದ್ವೇಷ, ಕ್ರೌರ್ಯಗಳ ಸುರಿಮಳೆ
ಒಬ್ಬರ ಮೇಲೆ ಒಬ್ಬರ ಹಾರಾಟ
ಮರ್ಮಾಂಗದ ಮೇಲೆಯೇ ಒದೆತ ಕೆಸರು
ಕಲಿಸಿದಂತೆ ಕಚಪಚನೆ ತುಳಿತ
ಕುರ್ಚಿಗಾಗಿ
ಹಗಲಿರುಳು ಕಿತ್ತಾಟ, ಕಿರುಚಾಟ
ಇದು ಕಂಡು
ನಾಗರ ಕಂಡಂತೆ ಬೆಚ್ಚಿದವು
ಕೆಂಡ ತುಳಿದಂತೆ ಬೆವರಿದವು
'ಮಾತು ಸೊರಗಿದ ಭಾರತ' ನೋಡಿ
ಒಳಗೊಳಗೆ ಹಲಬಿದವು

ಏನಿತ್ತು, ಏನಾಯಿತು
ಭಾಗ್ಯವಿದಾತನ ಭಾರತ, ಸ್ವಾತಂತ್ರ್ಯ

ಒಂದು ಕ್ಷಣ ಮರೆತು
ಮತ್ತೇ ಹಾರುತ್ತ ಹಾಡುತ್ತ
ಪಕ್ಕದಲಿ ಬಂದು ಮೆಲ್ಲನೇ ಕೇಳಿದವು
ಹೇಗಿತ್ತು, ಹೇಗಾಗಿದೆ ಭಾರತ
ಎನ್ನುತ್ತಲೇ
ಮತ್ತೇ ಹಾರಿದವು ಮುಗಿಲಿನೆಡೆಗೆ
ದೃಷ್ಟಿ ಇತ್ತು ಬುವಿಯ ಕಡೆಗೆ

ಇದ ನೋಡುತ್ತಲೇ ದಿಕ್ಕು ತೋಚದೆ
ನಿಟ್ಟುಸಿರಿನಲಿ ಕೈ ಹೊತ್ತು
ಕುಳಿತ ದಾರಿಹೋಕ